# ಶ್ರೀ ವಾಸವಾಂಬ ಕೋ-ಆಪರೇಟಿವ್ ಬ್ಯಾಂಕಿನ ನೂತನ ಎಟಿಎಂ ಪ್ರಾರಂಭ
## ಜಿಲ್ಲೆಯಲ್ಲಿ ವಾಸವಾಂಬ ಬ್ಯಾಂಕ್ ಮುಂಚೂಣಿಯಲ್ಲಿದೆ : ಶಾಸಕ ಎಚ್.ಡಿ. ರೇವಣ್ಣ




**ಹೊಳೆನರಸೀಪುರ :** ಶತಮಾನವನ್ನು ಪೂರೈಸಿ ಮುನ್ನಡೆಯುತ್ತಿರುವ ವಾಸವಾಂಬ ಕೋ-ಆಪರೇಟಿವ್ ಬ್ಯಾಂಕ್ ವಾರ್ಷಿಕ ರೂ.350ಕೋಟಿ ವಹಿವಾಟು ನಡೆಸಿ ಜಿಲ್ಲೆಯಲ್ಲಿನ ಸಹಕಾರ ಬ್ಯಾಂಕುಗಳಲ್ಲಿ ಮುಂಚೂಣಿಯಲ್ಲಿರುವುದು ಶ್ಲಾಘನೀಯ ಸಂಗತಿ ಎಂದು ಮಾಜಿ ಸಚಿವ ಹಾಗೂ ಶಾಸಕ ಎಚ್.ಡಿ. ರೇವಣ್ಣ ಹೇಳಿದರು.

ಹೊಸ ವರ್ಷದಂದು ವಾಸವಾಂಬ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ನೂತನವಾಗಿ ಆರಂಭಿಸಲಾದ ಎಟಿಎಂ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಒಂದು ಸಹಕಾರಿ ಬ್ಯಾಂಕು ವಾರ್ಷಿಕವಾಗಿ 350 ಕೋಟಿಗೂ ಅಧಿಕವಾದ ವಹಿವಾಟು ನಡೆಸುವುದು ಸುಲಭದ ಮಾತಲ್ಲ, ಆದರೆ ವಾಸವಾಂಬ ಸಹಕಾರಿ ಬ್ಯಾಂಕ್ ತನ್ನ ಸೇವಾತತ್ಪರತೆಯಿಂದ ರಾಜ್ಯದಲ್ಲಿನ ಆರ್ಯವೈಶ್ಯ ಸಹಕಾರ ಬ್ಯಾಂಕುಗಳಲ್ಲೇ ಪ್ರಪ್ರಥಮವಾಗಿ ಎಟಿಎಂ ಕೇಂದ್ರವನ್ನು ಆರಂಭಿಸಿರುವುದು ನಿಜಕ್ಕೂ ಇದರ ಉನ್ನತಿಯನ್ನು ತೋರುತ್ತದೆ ಎಂದರು. ಸಮಾಜದ ಎಲ್ಲಾ ವರ್ಗದ ಜನಸಾಮಾನ್ಯರಿಗೂ ಉತ್ತಮ ಸೇವಾ ಸೌಲಭ್ಯಗಳನ್ನು ನೀಡುವ ಮೂಲಕ ಸಹಕಾರಿ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸುವಂತಾಗಲಿ ಎಂದು ಹಾರೈಸಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮುಂಬಯಿನ ಮ್ಯಾಕ್ಸಿಮಸ್ ಇನ್ಫೋವೇರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕಿ ಉಮಾಶಂಕರ್ ಮಾತನಾಡಿವಾಸವಾಂಬ ಬ್ಯಾಂಕಿನ ಅಭಿವೃದ್ಧಿ ದಿನೇ ದಿನೇ ಉನ್ನತಿ ಕಾಣಲು ಕಾರಣ ಇಲ್ಲಿನ ಕಾರ್ಯಕಾರಿ ಮಂಡಳಿಯ ಸಹಕಾರದ ಡಿಜಿಟಲೀಕರಣ ಹಾಗೂ ಉನ್ನತೀಕರಣದ ಸೇವಾ ಸೌಲಭ್ಯಗಳೇ ಕಾರಣ ಎಂದರಲ್ಲದೇ, ವಾಸವಾಂಬ ಬ್ಯಾಂಕಿನ ನೂತನ ಎಟಿಎಂ ವಿಶೇಷತೆಯೆಂದರೆ ಈ ಬ್ಯಾಂಕಿನ ಎಟಿಎಂ ಕಾರ್ಡನ್ನು ಯಾವುದೇ ಬ್ಯಾಂಕಿನ ಎಟಿಎಂಗಳಲ್ಲಿ ಉಪಯೋಗಿಸುವ ಜೊತೆಗೆ ಬೇರೆ ಬ್ಯಾಂಕುಗಳ ಎಟಿಎಂಗಳನ್ನೂ ಇಲ್ಲಿ ಬಳಸಬಹುದಾಗಿರುವುದು ವಿಶೇಷ ಎಂದರು.

ವಾಸವಾಂಬ ಬ್ಯಾಂಕಿನ ಅಧ್ಯಕ್ಷ ಎನ್.ಜಿ. ಮುಕುಂದ ಅಧ್ಯಕ್ಷತೆ ವಹಿಸಿ ಮಾತನಾಡಿ ಇಂದಿನ ಒತ್ತಡದ ಬದುಕಿನ ನಡು ಗ್ರಾಹಕರನ್ನು ಕಾಯಿಸುವ ಪ್ರಕ್ರಿಯೆಯನ್ನು ತಪ್ಪಿಸುವ ಸಲುವಾಗಿ ನಮ್ಮ ಬ್ಯಾಂಕು ಹಲವಾರು ಅಭಿವೃದ್ಧಿ ಯೋಜನೆಗಳೊಂದಿಗೆ ಇತರೆ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸರಿಸಮಾನವಾಗಿ ಸೇವಾ ಸೌಲಭ್ಯವನ್ನು ನೀಡುತ್ತಿದ್ದು, ಇದಕ್ಕೆ ಬ್ಯಾಂಕಿನ ಕಾರ್ಯಕಾರಿ ಮಂಡಳಿ ಹಾಗೂ ಸಿಬ್ಬಂದಿ ಸಹಕಾರ ಪ್ರಮುಖವಾಗಿದೆ ಎಂದರು.

ಸಹಕಾರ ಇಲಾಖೆಯ ಡೆಪ್ಯುಟಿ ರಿಜಿಸ್ಟ್ರಾರ್ ನಂಜುಂಡೇಗೌಡ ಮಾತನಾಡಿ ವಾಸವಾಂಬ ಕೋ-ಆಪರೇಟಿವ್ ಬ್ಯಾಂಕ್ ಒಂದು ಶತಮಾನದ ಇತಿಹಾಸ ಹೊಂದಿದ್ದು ಜಿಲ್ಲೆಯಲ್ಲಿಯೇ ಉತ್ತಮ ಸಹಕಾರಿ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಶತಮಾನೋತ್ಸವದ ಸವಿನೆನಪಿಗಾಗಿ ಪಕ್ಕದ ಅರಕಲಗೂಡು ಪಟ್ಟಣದಲ್ಲಿ ಶಾಖೆ ತೆರೆದು ಉತ್ತಮ ಸೇವೆ ನೀಡುತ್ತಿದೆ. ಅದರಂತೆ ಮತ್ತಷ್ಟು ಶಾಖೆಗಳನ್ನು ತೆರೆದು ಸಾರ್ವಜನಿಕರಿಗೆ ಉತ್ತಮ ಸೇವೆ ನೀಡಬೇಕು ಎಂದು ತಿಳಿಸಿದರು.

ಪ್ರಸ್ತುತ ಬ್ಯಾಂಕು ಉಳಿತಾಯ ಖಾತೆ ಮತ್ತು ಷೇರು ಹಣ ಈ ಎರಡರಲ್ಲಿ ಆದಾಯ ಕಡಿಮೆ ಇದೆ. ಅದನ್ನು ನೀವುಗಳು ಮತ್ತಷ್ಟು ಹೆಚ್ಚು ಮಾಡಿಕೊಳ್ಳುವುದರಿಂದ ಬ್ಯಾಂಕಿಗೆ ಆದಾಯ ಮತ್ತಷ್ಟು ಬರಲಿದೆ. ಈ ಬ್ಯಾಂಕಿಂಗ್ ಕ್ಷೇತ್ರ ಕೇವಲ ಲಾಭಕ್ಕಾಗಿ ಮಾಡುವುದನ್ನು ಬದಿಗಿಟ್ಟು ಸಾರ್ವಜನಿಕ ಸೇವೆ ಎಂಬ ರೀತಿಯಲ್ಲಿ ಮುಂದಡಿ ಇಡುವುದರಿಂದ ಸಾರ್ವಜನಿಕರಿಗೆ ಮತ್ತಷ್ಟು ಉತ್ತಮ ಸೇವೆ ಲಭಿಸಲಿದೆ ಎಂದರು.

ವಾಸವಾಂಬ ಬ್ಯಾಂಕಿನ ಅಧ್ಯಕ್ಷ ಎನ್.ಜಿ. ಮುಕುಂದ ಅಧ್ಯಕ್ಷತೆ ವಹಿಸಿ ಮಾತನಾಡಿ ಇಂದಿನ ಒತ್ತಡದ ಬದುಕಿನ ನಡುವೆ ಗ್ರಾಹಕರನ್ನು ಕಾಯಿಸುವ ಪ್ರಕ್ರಿಯೆಯನ್ನು ತಪ್ಪಿಸುವ ಸಲುವಾಗಿ ನಮ್ಮ ಬ್ಯಾಂಕು ಹಲವಾರು ಅಭಿವೃದ್ಧಿ ಯೋಜನೆಗಳೊಂದಿಗೆ ಇತರೆ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸರಿಸಮಾನವಾಗಿ ಸೇವಾ ಸೌಲಭ್ಯವನ್ನು ನೀಡುತ್ತಿದ್ದು, ಇದಕ್ಕೆ ಬ್ಯಾಂಕಿನ ಕಾರ್ಯಕಾರಿ ಮಂಡಳಿ ಹಾಗೂ ಸಿಬ್ಬಂದಿ ಸಹಕಾರ ಪ್ರಮುಖವಾಗಿದೆ ಎಂದರು. ಸಮಾರಂಭದಲ್ಲಿ ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ನಿರ್ದೇಶಕರು ಮತ್ತು ವ್ಯವಸ್ಥಾಪಕ ಎಸ್.ಆರ್. ಮೂರ್ತಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಶಾಮಲಾದಾಸ್ ಪ್ರಾರ್ಥಿಸಿದರು. ಎ.ಆರ್. ರವಿಕುಮಾರ್ ಸ್ವಾಗತಿಸಿದರು. ಎ.ಎ. ಕೃಷ್ಣ ನಿರೂಪಿಸಿದರು.